SC:111/2021
PW:25 CW:40

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

ಹೇಳಿಕೆ ಹಾಳೆ
ಆರ್.ಪಿ. ಸಂಖ್ಯೆ57
ನಮೂನೆ ಸಂಖ್ಯೆ4
(ಸಿವಿಲ್)

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 111/2021

| | |
|---|---|
| PW | 25 |
| CW | 40 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 21.12.2024.**

ಸಾಕ್ಷಿಯ ಹೆಸರು : ಪ್ರಭಾಕರ್ ರೆಡ್ಡಿ
ತಂದೆಯ ಹೆಸರು : ಗಂಗ ರೆಡ್ಡಿ
ವಯಸ್ಸು : 46 ವರ್ಷ
ಉದ್ಯೋಗ : ವ್ಯವಸಾಯ
ವಾಸಸ್ಥಳ : ಬಿ. ಬೊಮ್ಮಸಂದ್ರ

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

1. ನನಗೆ ಮೃತ ವಿಶ್ವನಾಥ್ ಇವರ ಪರಿಚಯ ಇತ್ತು. ಚಾಸಾ–1 ರಿಂದ ಚಾಸಾ–3 ರವರ ಪರಿಚಯ ಇದ್ದು ಉಳಿದ ಸಾಕ್ಷಿದಾರರ ಪರಿಚಯ ಇಲ್ಲ. ಈ ದಿನ ನ್ಯಾಯಾಲಯದ ಮುಂದೆ ವಿ ಸಿ ಮುಖಾಂತರ ಹಾಜರುಪಡಿಸಿದ 1 ಮತ್ತು 3 ನೇ ಆರೋಪಿತರ ಪರಿಚಯ ಇಲ್ಲ ಅದೇ ರೀತಿ ನ್ಯಾಯಾಲಯದ ಮುಂದೆ ಹಾಜರು ಇರುವ 2 ಮತ್ತು 4 ನೇ ಆರೋಪಿತರ ಪರಿಚಯ ಇಲ್ಲ.

2. ಸಾಕ್ಷಿದಾರರು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–46, ಸಾಕ್ಷಿದಾರರ ಸಹಿಯನ್ನು ನಿಪಿ–46(ಎ) ಎಂದು ಗುರುತಿಸಲಾಯಿತು. ನಿಪಿ–46 ಕ್ಕೆ ನಾನು ಗೌರಿಬಿದನೂರು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು ಎಷ್ಟು ವರ್ಷಗಳ ಹಿಂದೆ ಸಹಿ ಮಾಡಿದ್ದೇನೆ ಎಂದು ನೆನಪು ಇಲ್ಲ. ಯಾವುದೋ ಒಂದು ಪ್ರಕರಣ ದಾಖಲಾಗಿದ್ದು ಅದಕ್ಕಾಗಿ ಸಹಿ ಮಾಡುವಂತೆ ಪೊಲೀಸರು ನಿಪಿ–46 ಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ನನ್ನ ಸಮಕ್ಷಮ ಮಹಜರ್ ಜರುಗಿಸಿ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಲ್ಲ. ನನ್ನ ಜೊತೆ ನಿಪಿ–46 ಕ್ಕೆ ಶ್ರೀನಿವಾಸ ರೆಡ್ಡಿ, ಶಿವಾರೆಡ್ಡಿ ಹಾಗೂ ನರಸಿಂಹರೆಡ್ಡಿ ಅವರು ಸಹಿ ಮಾಡಿರುತ್ತಾರೆ. ಆ ದಿನ 1 ನೇ ಆರೋಪಿ ಪೊಲೀಸರಿಗೆ ಏನನ್ನು ತೋರಿಸಿಲ್ಲ, ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಲ್ಲ. ನಿಪಿ–46 ರಲ್ಲಿ ಬರೆದ ವಿಚಾರಗಳು ನನಗೆ ತಿಳಿದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

3. ದಿನಾಂಕ 15.07.2021 ರಂದು ಮಧ್ಯಾಹ್ನ 1.30 ರಿಂದ 2.30 ರ ಸಮಯದಲ್ಲಿ ಪೊಲೀಸರು ನನ್ನನ್ನು ಹಾಗೂ ಚಾಸಾ–41 ರವರನ್ನು ಠಾಣೆಗೆ ಬರಮಾಡಿಕೊಂಡು ಠಾಣೆಯಲ್ಲಿ ಇದ್ದ 1 ನೇ ಆರೋಪಿಯನ್ನು ತೋರಿಸಿದ್ದು, 1 ನೇ ಆರೋಪಿ ತನ್ನ ಪರಿಚಯವನ್ನು ಮಾಡಿಕೊಂಡು ತಾನು ಧರಿಸಿದ್ದ ರಕ್ತದ ಕಲೆ ಇದ್ದ ಒಂದು ಕಾಟನ್ ಶರ್ಟ್, ಬರ್ಮುಡಾ ನಿಕ್ಕರ್ ನಲ್ಲಿ ಇದ್ದ ಒಂದು ಒಪ್ಪೊ ಕಂಪನಿ ಮೊಬೈಲ್ ಫೋನ್ ಹಾಜರುಪಡಿಸಿದ್ದು

ಸದರಿ ಶರ್ಟ್ ಹಾಗೂ ಮೊಬೈಲ್ ಫೋನನ್ನು ಪೊಲೀಸರು ಠಾಣೆಯಲ್ಲಿ ನಿಪಿ–46 ಮಹಜರ್ ಮೂಲಕ ನಮ್ಮ ಸಮಕ್ಷಮ ಜಪ್ತಿಪಡಿಸಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ನನ್ನ ಜೊತೆ ನಿಪಿ–46 ಕ್ಕೆ ಚಾಸಾ–41 ರವರು ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ನನಗೆ ನಿಪಿ–46 ರ ಬಗ್ಗೆ ಮಾಹಿತಿ ಇದ್ದರೂ ಸಹ, ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ಆರ್ ಹೆಚ್ ಹಾಗೂ ಶ್ರೀ ಕೆ ಎಸ್ ಎನ್ ವಕೀಲರಿಂದಃ**

ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ** 1 ನೇ ಆರೋಪಿ ಪರ ಶ್ರೀ ಎಸಿಡಿ ವಕೀಲರನ್ನು ಕೂಗಿಸಿದ್ದು ಗೈರುಹಾಜರಿದ್ದು ಯಾರೂ ಪ್ರತಿನಿಧಿಸದೇ ಇರುವ ಕಾರಣ 1 ನೇ ಆರೋಪಿ ಪರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

**ಮರುವಿಚಾರಣೆಃ ಇಲ್ಲ**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 21.12.2024 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/–
**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.